IJRAR.ORG E-ISSN: 2348-1269, P-ISSN: 2349-5138
INTERNATIONAL JOURNAL OF RESEARCH AND ANALYTICAL REVIEWS (IJRAR) | IJRAR.ORG
An International Open Access, Peer-reviewed, Refereed Journal

# ಲಂಕೇಶರ ಕತೆಗಳಲ್ಲಿ ಸ್ತ್ರೀ ಸಮಾಜ : ಒಂದು ಸಂಕ್ಷಿಪ್ತ ನೋಟ

**ಡಾ.ಮೃತ್ಯುಂಜಯ.ಎಚ್**
ಕನ್ನಡ ಸಹಾಯಕ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶ್ರೀನಿವಾಪುರ
ಕೋಲಾರ ಜಿಲ್ಲೆ-೫೬೩೧೩೫

ಸ್ವಾತಂತ್ರ್ಯ ಪೂರ್ವದ ತುಡಿತಗಳನ್ನು ಕುವೆಂಪು, ಕಾರಂತ, ಬೇಂದ್ರೆ, ಮಾಸ್ತಿಯರಲ್ಲಿ ಕಂಡರೆ ಸ್ವಾತಂತ್ರ್ಯೋತ್ತರ ತುಡಿತಗಳನ್ನು ಅನಂತಮೂರ್ತಿ, ಪೂರ್ಣಚಂದ್ರ ತೇಜಸ್ವಿ, ಪಿ.ಲಂಕೇಶ್, ಗಿರೀಶ್ ಕಾರ್ನಾಡ್ ಮೊದಲಾದವರಲ್ಲಿ ಕಾಣುತ್ತೇವೆ. ಆದರೆ ಪಿ.ಲಂಕೇಶ್ ತನ್ನ ಸಮಕಾಲೀನರಿಗಿಂತ ಭಿನ್ನವಾಗಿ ಕಾಣುತ್ತಾರೆ. ಸ್ವಾತಂತ್ರ್ಯಾನಂತರದ ಸಂದರ್ಭದಲ್ಲಿನ ರಾಜಕೀಯ ಮತ್ತು ಸಾಂಸ್ಕೃತಿಕ ಬದಲಾವಣೆಗಳನ್ನು ಲಂಕೇಶರಷ್ಟು ತೀವ್ರವಾಗಿ, ಅತ್ಯಂತ ನಿಷ್ಠೂರವಾಗಿ ತಮ್ಮ ಸಾಹಿತ್ಯದಲ್ಲಿ ಮೂಡಿಸಿದವರು ಮತ್ತೊಬ್ಬರಿಲ್ಲ.

ಲಂಕೇಶ್ ಸ್ವಾತಂತ್ರ್ಯೋತ್ತರ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಕಂಡ ವಿಶಿಷ್ಟ ಪ್ರತಿಭೆ. ಸಮಕಾಲೀನ ಸಮಾಜ, ಸಂಸ್ಕೃತಿ, ಮನುಷ್ಯ ಸಂಬಂಧಗಳ ಕುರಿತು ಸೂಕ್ಷ್ಮವಾಗಿ ಚಿಂತಿಸಿ, ತೀವ್ರತೆಯಿಂದ ಬರೆದವರು. ತನ್ನ ಕಾಲದ ಸಾಂಸ್ಕೃತಿಕ, ರಾಜಕೀಯ, ಸಾಮಾಜಿಕ, ಧಾರ್ಮಿಕ ವಿದ್ಯಮಾನಗಳಿಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದವರು. ಸಾಹಿತ್ಯದ ಸಾಧ್ಯತೆಗಳನ್ನು ಅರಿತವರು. ಮನುಷ್ಯನ ಮೂಲಭೂತ ಸಮಸ್ಯೆಗಳನ್ನು ಕಂಡುಕೊಂಡು ಅವುಗಳ ಪರಿಹಾರದ ಮಾರ್ಗಗಳಿಗೋಸ್ಕರ ಪರಿತಪಿಸುವ ಲಂಕೇಶ್ ನಿಜಕ್ಕೂ ತಮ್ಮ ಬರಹಗಳಲ್ಲಿ ತಲೆಮಾರಿನ ತಲ್ಲಣಗಳನ್ನು ದಾಖಲಿಸುತ್ತಾರೆ.

ಮನುಷ್ಯ ಮೂಲಭೂತವಾಗಿ ಸ್ವಾರ್ಥಿ ಮತ್ತು ನೀಚ ಎಂಬುದನ್ನು ಅವನ ನಡವಳಿಕೆಗಳಿಂದಲೇ ನಿರೂಪಿಸುವ ಲಂಕೇಶ್, ಸಿದ್ಧ ನಂಬಿಕೆ ಮತ್ತು ಅಭಿಪ್ರಾಯಗಳನ್ನು ಅನುಮಾನಿಸುತ್ತಾರೆ. ವಾಸ್ತವದ ನೆಲೆಯಿಂದ ನಿಷ್ಠುರ ನಿಲುವುಗಳನ್ನು ಕಟ್ಟಿಕೊಡುತ್ತಾರೆ. ಮನುಷ್ಯನ ಅವಿವೇಕಗಳನ್ನ ವಿಭಿನ್ನ ಆಯಾಮಗಳಲ್ಲಿ ಅನಾವರಣಗೊಳಿಸಬೇಕು, ಮನುಷ್ಯ ಧರಿಸುವ ಸಾಮಾಜಿಕ ಮುಖವಾಡಗಳನ್ನು ತೆರೆದಿಟ್ಟು ಆತನ ನಿಜತ್ವದಲ್ಲಿ ಅಭಿಪ್ರಾಯಗಳು ಯಾವ ಹಂಗಿಲ್ಲದೆ ಹೊರ ಬರಬೇಕು, ಆ ಸ್ಫೋಟದಲ್ಲಿಯೇ ವ್ಯಕ್ತಿಗಳನ್ನ ನಗ್ನರಾಗಿಸಬೇಕು, ಅತ್ಯಂತ ಉತ್ಕಟ ಕ್ಷಣದಲ್ಲಿ ವ್ಯಕ್ತಿ ಏನು ಎಂಬುದನ್ನು ಬಹಿರಂಗವಾಗಿ ತೆರೆದಿಡಬೇಕು ಎಂಬುದು ಲಂಕೇಶರ ಬರಹದ ಆಶಯವಾಗಿತ್ತು. ಈ ಹಿನ್ನೆಲೆಯಲ್ಲಿ ಲಂಕೇಶ್ ತನ್ನ ಕತೆಗಳಲ್ಲಿ ಸ್ತ್ರೀ ಸಮಾಜವನ್ನು ಭಿನ್ನ ನೋಟ-ನೆಲೆಗಳಲ್ಲಿ ಚಿತ್ರಿಸುತ್ತಾರೆ.

ಲಂಕೇಶ್ ಕತೆಗಳಲ್ಲಿನ ಸ್ತ್ರೀ ಸಮಾಜ ಬಹುಪಾಲು ಏಕಾಂಗಿತನ, ಪಾಪಪ್ರಜ್ಞೆ, ಅಸಹಾಯಕತೆಗಳ ನಡುವೆಯೂ, ಜೀವನ್ಮುಖಿಗಳಾಗಿ ಕಾಣುತ್ತದೆ. ನವ್ಯ ಕಾಲಘಟ್ಟದವರು ಸ್ತ್ರೀಯನ್ನು ಕೇವಲ ಕಾಮ-ಪ್ರೇಮಗಳಿಗೆ ಮಾತ್ರ ಸೀಮಿತಗೊಳಿಸಿದ್ದಾರೆ ಎಂಬ ಅಪವಾದವಿದೆ. ಆದರೆ ಲಂಕೇಶರ ಕಥೆಗಳ ಹಿನ್ನಲೆಯಲ್ಲಿ ಗಮನಿಸಿದಾಗ ಅನೈತಿಕ ಸಂಬಂಧದ ಚಿತ್ರಣ ಕೇವಲ ಸ್ತ್ರೀಯರಿಗಷ್ಟೆ ಮೀಸಲಾಗದೆ, ಸ್ತ್ರೀ-ಪುರಷರಿಬ್ಬರಿಗೂ ಸಂಬಂಧಿಸಿದೆ. ಅಷ್ಟಲ್ಲದೇ ಸ್ತ್ರೀಯರನ್ನು ದಿಟ್ಟವ್ಯಕ್ತಿತ್ವಗಳನ್ನಾಗಿ, ಸಬಲೆಯರನ್ನಾಗಿ, ಪ್ರಗತಿಪರರನ್ನಾಗಿ ಚಿತ್ರಿಸಿರುವುದನ್ನು ಕೂಡಾ ಗಮನಿಸಬಹುದು. ಈ ಹಿನ್ನೆಲೆಯಲ್ಲಿ ಲಂಕೇಶರ ಕತೆಗಳಲ್ಲಿ ದಟ್ಟವಾದ ಹಾಗೂ ದಿಟ್ಟೆಯರಾದ ಮಹಿಳಾ ಸಮಾಜವನ್ನು ಕಾಣಬಹುದು. “ಲಂಕೇಶರ ಕಥೆಗಳಲ್ಲಿ ವ್ಯಕ್ತವಾಗುವ ಸ್ತ್ರೀ ದೃಷ್ಟಿಕೋನ ನಮ್ಮ ಸಮಕಾಲೀನ ಮಹಿಳಾ ಬರಹಗಾರರ ಸಂವೇದನೆಗಿಂತ ಎಷ್ಟೋ ಪಾಲು ಪ್ರಖರವಾದದ್ದು. ನವೋದಯದ ಹಿರಿಯರಾದ ಕುವೆಂಪು, ಕಾರಂತ, ಮಾಸ್ತಿಯವರನ್ನು ಬಿಟ್ಟರೆ ಅವರ ಮುಂದಿನ ಪೀಳಿಗೆಯಲ್ಲಿ ತುಂಬಾ ಸ್ತ್ರೀ ಪಾತ್ರಗಳನ್ನು ಸೃಷ್ಟಿಸಿದ್ದು, ಲಂಕೇಶರೊಬ್ಬರೆ, ನಮ್ಮ ಲೇಖಕಿಯರು ಲಂಕೇಶರಿಂದ ಕಲಿಯುವುದು ತುಂಬಾ ಇದೆ”.[೧]

ಲಂಕೇಶರು ಸ್ತ್ರೀಯರನ್ನು ದಿಟ್ಟ ಮಹಿಳೆಯನ್ನಾರಾಗಿಯೂ, ಸ್ವಾಭಿಮಾನಿಗಳನ್ನಾಗಿಯೂ ನೋಡಿದ್ದಾರೆ ಎಂಬುದಕ್ಕೆ 'ಕೆರೆಯ ನೀರನ್ನು ಕೆರೆಗೆ ಚೆಲ್ಲಿ' ಕತೆಯಲ್ಲಿ ಗೌರಿಯ ಅಜ್ಜ, ಅಜ್ಜಿ, ಗೌರಿ ಮತ್ತು ಪರಮೇಶನಿಗೆ ಮದುವೆ ಮಾಡಬೇಕು ಎಂದು ನಿರ್ಧರಿಸಿದ್ದರೂ ಸಮಾಜದ ಪಾರಂಪರಿಕ ಮೌಲ್ಯಗಳನ್ನು ಧಿಕ್ಕರಿಸಿ ಮನೆಗೆಲಸದವನಾದ ಶಿವರುದ್ರುವನ್ನು ಪಡೆಯುತ್ತಾಳೆ. ಗೌರಿ ತನ್ನ ಆಯ್ಕೆಯ ಸ್ವಾತಂತ್ರ್ಯವನ್ನು ಬಳಸಿಕೊಡು ಶಿವರುದ್ರನನ್ನು ಒಲಿಯುತ್ತಾಳೆ. ಬಯಸಿದ ವ್ಯಕ್ತಿತ್ವವನ್ನು ಒಲಿಯುವಾಗ ಸಮಾಜದ ನಂಬಿಕೆಗಳನ್ನು ಮೀರುತ್ತಾಳೆ. ಅಂತಸ್ತು, ಬಣ್ಣ, ಜಾತಿ ಇವೆಲ್ಲಾ ಗೌರಿಗೆ ನಗಣ್ಯ. "ತನ್ನ ಮಾವ ಪರಮೇಶ ಜಗನ್ಮೋಹಿನಿ ಸಿನಿಮಾದಲ್ಲಿ ಮಾಡಿದ ಹಾಗೆ ಪ್ರೇಮ ವ್ಯಕ್ತಪಡಿಸಲು ಬಂದಾಗ ಅಸಹ್ಯವಾಗಿ ವಾಕರಿಕೆ ಬಂದರೂ ತೋರಿಸದೆ ಕೃತಕವಾಗಿ ನಕ್ಕವಳೂ"[೨] "ತನ್ನ ಸೀರೆಗೆ ಬೆಂಕಿ ಬಿದ್ದಾಗ ನಂದಿಸಲು ಬಂದ ಶಿವರುದ್ರುವಿನ ಕೊರಳನ್ನು ಅಪ್ಪಿ ತುಟಿಯ ಮೇಲೆ ತುಟಿಯಿಟ್ಟು, ಎದೆಯನ್ನು ಬೆಚ್ಚಗೆ ಒತ್ತಿಕೊಂಡು ಬಿಡಬ್ಯಾಡ ಎನ್ನುತ್ತಾಳೆ".[೩] ಒಪ್ಪಿತ ಸಮಾಜದ ನೀತಿ–ನಿಯಮಗಳನ್ನು ಭಗ್ನಗೊಳಸುವ ದಿಟ್ಟೆಯಾಗಿ ಗೌರಿ ಕಂಡಬರುತ್ತಾಳೆ. ಮುಂದುವರಿದು 'ವಾಸನೆ' ಕತೆಯಲ್ಲಿನ ವಿದ್ಯಾವಂತೆ ಸಾಕಮ್ಮ ತನ್ನ ಗಂಡ ಸಾಯುತ್ತಾರೆ ಎಂದು ನಿರ್ಧರಿಸಿ ವೀರರಮಣಿಯ ಹಾಗೆ ಸಹಿಸಿಕೊಳ್ಳುವುದು ಉತ್ತಮವೆಂದು, ತನಗೆ ತಾನೆ ಸಮಾಧಾನಿಸಿಕೊಂಡು, ಆದರ್ಶ ಜೀವನವನ್ನು ಕಟ್ಟಿಕೊಂಡು, ಗೌರವಯುತವಾಗಿ ಜೀವನ ಸಾಗಿಸುತ್ತಾಳೆ. ತನ್ನ ಬದುಕಿನ ಸಂಧ್ಯಾಕಾಲದಲ್ಲೂ ಇನ್ನೊಬ್ಬರಿಗೆ ಹೊರೆಯಾಗದೆ ದುಡಿದು ಸ್ವಾವಲಂಬಿ ಬದುಕನ್ನು ಕಟ್ಟಿಕೊಳ್ಳುವ ಚಿನ್ನಮ್ಮನನ್ನು 'ಒಂದು ಬಾಗಿಲು' ಕಥೆಯಲ್ಲಿ ನೋಡಬಹುದು. 'ಕೃತಜ್ಞತೆ' ಕತೆಯಲ್ಲಿನ ನಿರ್ಮಲ ಪುರುಷ ಪ್ರಧಾನ ಸಮಾಜದಿಂದ ಶೋಷಣೆಗೊಂಡಿದ್ದರೂ, ಅದೇ ಸಮಾಜದಲ್ಲಿ ಧೃತಿಗೆಡದೆ ನಾಲ್ಕಾರು ಜನರಿಗೆ ಕೆಲಸ ಕೊಡುವ ಮಟ್ಟಕ್ಕೆ ಬೆಳೆಯುತ್ತಾಳೆ. ಇನ್ನಂದು ಮುಖ್ಯ ಕಥೆಯಾದ ಕಲ್ಲುಕರಗುವ ಸಮಯ ಕಥೆಯನ್ನು ಇಲ್ಲಿ ಗಮನಿಸಬೇಕು. ಕ್ರೌರ್ಯವೇ ತುಂಬಿದ್ದ ಊರಲ್ಲಿ ಮನೆಯವರ, ಊರಿನವರ, ಮಠ, ಜಗದ್ಗುರುಗಳ ಹಾಗೂ ಸಮಾಜದ ವಿರುದ್ಧವಾಗಿ ಹೋರಾಡಿ ಬೇಡರ ತಿಪ್ಪಣ್ಣನನ್ನು ಮದುವೆ ಆಗುವ 'ಕಲ್ಲು ಕರಗುವ ಸಮಯ' ಕತೆಯ ಶ್ಯಾಮಲ ದಿಟ್ಟ ಹೆಣ್ಣಾಗಿ ಕಂಡುಬರುತ್ತಾಳೆ. "ಅದೊಂದು ವೀರಾವೇಷದ, ಮಾರಾಮಾರಿಯ ಊರು. ಹೆಂಡತಿ ವ್ಯಭಿಚಾರ ಮಾಡಿದರೆ ಗಂಡನ ವಾದವಾಗಲಿ, ಗುಪ್ತವಾಗಿ ವ್ಯಸನ ಪಡುವುದಾಗಲಿ ಆ ಊರಲ್ಲಿ ಇರಲಿಲ್ಲ; ವ್ಯಭಿಚಾರ ಮಾಡಿದವಳು ಮತ್ತು ಆಕೆಯ ಪ್ರಿಯಕರ ಇಬ್ಬರ ಕೊಲೆಯೂ ಒಂದೇ ಗಳಿಗೆಯಲ್ಲಿ ಆಗುತ್ತಿತ್ತು. ಕೊಟ್ಟ ಹಣ ಹಿಂದಿರುಗಿಸದೆ ಇದ್ದರೆ ಕೂಡ. ಕಂಬಕ್ಕೆ ಕಟ್ಟಿ ಹೊಡೆದು ಜೀತ ಮಾಡಿಸುವುದು. ಸಂಪ್ರದಾಯ. ಕುಟುಂಬಗಳ ಜಿದ್ದೂ ಹಾಗೆಯೇ. ಎರಡರಲ್ಲಿ ಒಂದು ಕುಟುಂಬ ಢಪನ್ ಆದಂತಯೇ. ಪಂಚಾಯಿತಿಗಳೆಂದರೆ ತಪ್ಪು ಮಾಡಿದವರನ್ನು ಬೆಂಕಿಗೆ ಇಕ್ಕುವ ಸಂದರ್ಭಗಳು".[೪] ಈ ರೀತಿಯ ಕ್ರೂರತೆಯೇ ತುಂಬಿದ್ದ ಊರಲ್ಲಿ ಲಿಂಗಾಯಿತ ಜಾತಿಗೆ ಸೇರಿದ ಶ್ಯಾಮಲಾ ಬೇಡರ ಜಾತಿಗೆ ಸೇರಿದ ತಿಪ್ಪಣ್ಣನನ್ನು ಪ್ರೀತಿಸುತ್ತಾಳೆ. ಮೇಲ್ವರ್ಗ–ಕೆಳವರ್ಗವೆಂಬ ಸಮಾಜದಲ್ಲಿ ಕಟ್ಟುಪಾಡುಗಳಿರುವ ಹಳ್ಳಿಗಳಲ್ಲಿ ಇವಳ ವರ್ತನೆ ಹೊಸ ಅಲೆಯನ್ನು ಸೃಷ್ಟಿಸಿಬಿಡುವುದಂತು ಸತ್ಯ. 'ಸ್ಟೆಲ್ಲಾ ಎಂಬ ಹುಡುಗಿ' ಕತೆಯಲ್ಲಿ ನರ್ಸ್ ಆಗಿರುವ ವಿದ್ಯಾವಂತೆ ಸ್ಟೆಲ್ಲಾ ತನ್ನ ಆಸ್ತಿ ಹೊಡೆಯಲು ಯಾವ ಹೊಂದಾಣಿಕೆಗೂ ಸಿದ್ಧನಾಗಿರುವ ಕುಡುಕ ಸ್ಮಿತ್ ಹಾಗೂ ದೈಹಿಕ ಸಂಬಂಧಕ್ಕಷ್ಟೆ ಹಾತೊರೆಯುವ ಪ್ರಿಯಕರ ಪ್ರಾನ್ಸಿಸ್ ಇವರಿಬ್ಬರಿಂದ ದೂರವಿದ್ದು, ಒಂಟಿತನ ಹಾಗೂ ಅಸಹಾಯಕತೆಯಲ್ಲೂ ಬದುಕಿನಲ್ಲಿ ಉತ್ಸಾಹ ಕಳೆದುಕೊಳ್ಳದೆ ಸ್ವಾವಲಂಬಿಯಾಗಿ ಬದುಕುತ್ತಾಳೆ. ಈ ಇಬ್ಬರು ಗಂಡಸರ ಸ್ವಾರ್ಥದ ಬಲೆಯಲ್ಲಿ ಬಿದ್ದೂ ಜೀವನೋತ್ಸಾಹದಿಂದ ಪುಟಿಯುವ ಸ್ಟೆಲ್ಲಾ ಅಸಹಾಯಕತೆಯಲ್ಲಿ ತೀವ್ರ ದುಃಖವನ್ನು ಅನುಭವಿಸುತ್ತಾಳೆ. ಇದಕ್ಕೆ ಪೂರಕವೆಂಬಂತೆ "ಎಲ್ಲಾ ಮನುಷ್ಯರ ಪ್ರೀತಿಸುವ ಅವರ ಮಿತಿಗಳ ಬಗ್ಗೆ ಅನುಕಂಪದ, ಸರ್ವರ ಹಿತಕ್ಕಾಗಿ ಧ್ಯಾನಿಸುವ ಧೋರಣೆ ಇದೆ. ಒಂದು ಪಾತ್ರದ ಕೇವಲ ಭಾವಲಹರಿಯಲ್ಲಿ ಇದು ನಿಜವಾಗದೆ ಕಥೆಗಾರನ ಗ್ರಹಿಕೆಯಲ್ಲಿ ಗಟ್ಟಿಗೊಳ್ಳುವ ಈ ದೋರಣೆಯಿಂದಾಗಿ ಸ್ಟೆಲ್ಲಾ ಎಂಬ ಹುಡುಗಿ ತುಂಬಾ ಕಾಡುವ ಕಥೆಯಾಗುತ್ತದೆ. ಸುಬ್ಬಣ್ಣನ ಸಂಕಟ ಮತ್ತು ಸ್ಟೆಲ್ಲಾಳ ತಲ್ಲಣ ಒಂದು ಕೇಂದ್ರದಲ್ಲಿ ಸಂಧಿಸಿ ಧ್ಯಾನವಾಗುವ, ಪ್ರಾರ್ಥನೆಯಾಗುವ ಅದ್ಭುತ ಸ್ಥಿತಿ ಇಲ್ಲಿದೆ".[೫] ಎನ್ನುವ ಮಾತು ಸಮರ್ಥನೀಯವಾದದು.

'ವಾಸ್ತವ' ಕಥೆಯಲ್ಲಿ ತನ್ನ ಬಾಸ್‌ನಿಂದ ಒದಗಿದ ಸಮಸ್ಯೆಗಳನ್ನು ಎದುರಿಸಿದ ಬಗೆಯನ್ನು ಮತ್ತು ತನ್ನ ಗಂಡನ ಅವಾಸ್ತವಿಕ ನಡತೆಯಿಂದ ಘಾಸಿಗೊಂಡಿದ್ದ ಮನಸನ್ನು ನಿರಾಳ ಮಾಡಿಕೊಂಡ ಉದ್ಯೋಗಸ್ತ ಮಹಿಳೆಯಾಗಿ ಚಿತ್ರಣಗೊಂಡಿದ್ದಾಳೆ. 'ಉತ್ತರವಿಲ್ಲ' ಕತೆಯ ಮರಿಯಾ ತನ್ನ ಸಾಂಸಾರಿಕ ಬದುಕಲ್ಲಿ ಅಡ್ಡ ಬಂದ ರೋಸಾಳನ್ನು ಹೊಟ್ಟೆಯಿಂದ ಗಂಟಲವರೆಗೆ ಸೀಳಿ ಹಾಕಿ ತನ್ನ ಸಂಸಾರ ಸುಖದಿಂದ ನಡೆಯುವಂತೆ ಮಾಡಿಕೊಂಡ ದಿಟ್ಟ ಮಹಿಳೆಯಾಗಿ ಕಂಡುಬರುತ್ತಾಳೆ. 'ನನ್ನ ಗೆಳತಿ ಲೀಸಾ' ಕತೆಯಲ್ಲಿ ಲೀಸಾ ನ್ಯಾಯದ ವಿರುದ್ಧ ಪ್ರತಿಭಟಿಸುವ, ಹೋರಾಟ ಮನೋಭಾವದ ಹೆಣ್ಣಾಗಿ ಕಾಣುತ್ತಾಳೆ. 'ಕ್ವೀಜುವಿನ ಹಠ, ದಯೆ ಮತ್ತು ದಾಕ್ಷಿಣ್ಯ' ಕತೆಯಲ್ಲಿ ಕ್ವೀಜು ಅನ್ಯಾಯವನ್ನು ವಿರೋಧಿಸುವ ಹೆಣ್ಣಾಗಿ ಕಂಡುಬರುತ್ತಾಳೆ. 'ವೃಕ್ಷದ ವೃತ್ತಿ' ಕತೆಯಲ್ಲಿ ಪಾರ್ವತಜ್ಜಿ ತನ್ನ ಆಕಾಂಕ್ಷೆಗಳನ್ನು ಸಾಕಾರಗೊಳಸುವ ಅವಳ ವೈಶಿಷ್ಟ್ಯಪೂರ್ಣವಾದ ದಿಟ್ಟತನದ ಬದುಕು, 'ಮಾಜಮುಖಿ ಚಿಂತನೆ, ಮನುಷ್ಯ ಸಂಬಂಧಗಳನ್ನು ಗೌರವಿಸುವ

ಆದರ್ಶ ಮಹಿಳೆಯಾಗಿ ತೋರುತ್ತಾಳೆ. ಕೇವಲ ಸೀಮಿತವಾದಂತಹ ಆಸೆ–ಆಕಾಂಕ್ಷೆಗಳನ್ನು ಬಯಕೆಗಳನ್ನು ಹೊಂದಿದ್ದ ಹೆಣ್ಣು ಈಕೆ.ಇಂತಹ ಗುಣ ಎಲ್ಲ ಹೆಂಗಸರಲ್ಲಿ ಬರಲು ತುಂಬಾ ವಿರಳ.ಇವಳಲ್ಲಿದ್ದ ವಿಶೇಷತೆಯಿಂದ ಜನರೆಲ್ಲಾ ಇವಳ ಬಳಿ ಬರುತ್ತಿದ್ದರು. "ಯಾರಲ್ಲೂ ಹೇಳಲಾರದ ಗುಟ್ಟುಗಳನ್ನು ಕೂಡಾ ಹೇಳಲು ಬೇಕಾದ ಸ್ವಾತಂತ್ರ್ಯ, ನೆಮ್ಮದಿ ಅವಳೆದುರು ಸಿಗುತ್ತಿತ್ತು. ಪ್ರೇಮದಲ್ಲಿ ಸೋತ ಹುಡುಗಿಯರು, ಮಾನಸಿಕ ಒತ್ತಡದಿಂದ ನುಚ್ಚುನೂರಾದ ಪರಿಚಿತರು ಆಕೆಯೊಂದಿಗೆ ಮಾತಾಡಿ ನಗುತ್ತಾ ಹೋಗುತ್ತಿದ್ದರು."[೬] ಎಂಬ ಮಾತು ಆಕೆಯ ವ್ಯಕ್ತಿತ್ವದ ದೃಷ್ಟಿಯಿಂದ ಅರ್ಥಪೂರ್ಣವಾದುದು. ಅವಳ ತ್ಯಾಗ ಮತ್ತು ಶಕ್ತಿಯ ಮಾತನಾಡುವ ಕಥೆಗಾರ "ನನ್ನ ದೃಷ್ಟಿಯಲ್ಲಿ ಪಾರ್ವತಜ್ಜಿಯ ವ್ಯಕ್ತಿತ್ವ ಇಡಿಯಾಗಿತ್ತು. ಗೋಧಿಯ ಕಾಳನಂತೆ, ಪಾರಿವಾಳದ ವ್ಯಕ್ತಿತ್ವದಂತೆ, ಆಕೆ ಕಲ್ಪಿಸಿದ ಕತೆಗಳ ಜೀವಂತಿಕೆಯಂತೆ. ಇವತ್ತಿಗೂ ನನಗೆ ಅರ್ಥವಾಗದ ಪ್ರಶ್ನೆಯೆಂದರೆ ಪಾರ್ವತಮ್ಮನಿಗೆ ಆ ಶಕ್ತಿ ಆಕೆಯ ತ್ಯಾಗದಿಂದ ಬಂತೆ, ಧ್ಯಾನದಿಂದ ಬಂತೆ, ಆತ್ಮಶೋಧನೆಯಿಂದ ಬಂತೆ, ಹಕ್ಕಿಗಳ ಒಡನಾಟದಿಂದ ಬಂತೆ, ಮಕ್ಕಳಿಂದ ಬಂತೆ, ಆಕೆಯ ಮೋಹಕ ತೆಂಗಿನ ಮರದಿಂದ ಬಂತೆ".[೭] ಎನ್ನುತ್ತಾರೆ.

ಉತ್ತಮ ಸಾಂಸಾರಿಕ ಬದುಕಿದ್ದರೂ ಅನೈತಿಕ ವ್ಯಾಪಾರದಲ್ಲಿ ತೊಡಗುವ ಮಹಿಳಾ ಸಮಾಜವನ್ನು ಕೂಡಾ ಲಂಕೇಶ್ ಕಥೆಗಳಲ್ಲಿ ಕಾಣಬಹುದು. 'ದೇವಿ' ಕತೆಯಲ್ಲಿ ದೇವಿ ಗಂಡ ಚಂದ್ರಪ್ಪ ಇದ್ದರೂ ಸಿನಿಮಾ ನಿರ್ದೇಶಕ ರವಿನಾಯ್ಡು ಜೊತೆ ಸಂಬಂಧ ಹೊಂದುತ್ತಾಳೆ. ಕೇವಲ ಪುರುಷರು ಮಾತ್ರವಲ್ಲ ಮಹಿಳೆಯೂ ತನ್ನ ವಿವಾಹ ಪೂರ್ವ ಮತ್ತು ವಿವಾಹ ನಂತರದ ಲೈಂಗಿಕ ಸಂಬಂಧಗಳನ್ನು ನೆನೆದು ಸಂತಸದ ಕ್ಷಣಗಳನ್ನು ಅನುಭವಿಸುವ ಮಹಿಳಯಾಗಿ ದೇವಿ ಕಂಡುಬರುತ್ತಾಳೆ. ಪರಸ್ಪರ ವಿವಾಹ ಪೂರ್ವ ಮತ್ತು ವಿವಾಹೋತ್ತರ ಲೈಂಗಿಕ ಸಂಬಂಧಗಳು ಇಲ್ಲಿ ಚಿತ್ರಿತವಾಗಿವೆ. "ದೇವಿ' ಎನ್ನುವ ಗ್ರಾಮೀಣ ಹೆಣ್ಣುಮಗಳು ಇಂಥ ಸಂಬಂಧಗಳ ಬಗ್ಗೆ ಯಾವುದೇ ತಲೆಕೆಡಿಸಿಕೊಳ್ಳದೇ ಅಕ್ರಮ, ಸಕ್ರಮಗಳ ಬಗ್ಗೆ ತಾಕಲಾಟಗಳಿಲ್ಲದೆ ರವಿನಾಯ್ಡು ಬಂದುಹೋಗುವ ಸಂಬಂಧದ ನೆಲೆಯ ಪಾತ್ರವಾಗಿ ಚಂದ್ರಪ್ಪ ಸಮರ್ಥ ಗಂಡನೆ, ಅಲ್ಲವೇ ಎಂಬ ಅನುಮಾನದ ಪಾತ್ರವಾಗಿ ಮಗಳ ಪ್ರಸ್ತದ ಸಂದರ್ಭದಲ್ಲೂ ದೇವಿರಿಯ ಧ್ಯಾನ ತನ್ನ ಪ್ರಸ್ತದ ನೆನೆಪಾಗಿ ಬರುತ್ತದೆ. ತನ್ನ ದಾಂಪತ್ಯದ ದಿನಗಳನ್ನು ನೆನಪಿಸಿಕೊಳ್ಳುವಾಗ ಯಾವ ಬಗೆಯ ಭಯ, ಅಂಜಿಕೆ, ಸಂಕೋಚಗಳಿಲ್ಲದೆ ಹೇಳಿಕೊಳ್ಳುವ ನಿಲುವು, ನಿರ್ಭೀತ ವ್ಯಕ್ತಿತ್ವವಾಗಿ ಕಾಣತೊಡುಗುತ್ತಾಳೆ. ಆಕೆಯ ವ್ಯಕ್ತಿತ್ವ ಲೈಂಗಿಕ ಸಂಬಂಧಗಳ ಬಗ್ಗೆ ಆರೋಗ್ಯಕರ ನಿಲುವುಳ್ಳದ್ದು."[೮] ಎಂಬ ಕೆ. ಮರುಸಿದ್ದಪ್ಪ ಅವರ ಮಾತು ಈ ಹಿನ್ನೆಲೆಯಲ್ಲಿ ಸಮರ್ಥನೀಯವಾದುದು. 'ಎ ಸೂಸೈಡ್ ನೋಟ್' ಕತೆಯಲ್ಲಿ ಮೀನಾ ತನ್ನನ್ನು ಪ್ರೀತಿಸುವ ಒಳ್ಳೆಯ ಗಂಡನಿದ್ದರೂ, ವಿವಾಹಪೂರ್ವ ಪ್ರೇಮಿಯಾದ ಜಗ್ಗುವಿನ ಜೊತೆ ಅನುರಕ್ತಳಾಗುತ್ತಾಳೆ. 'ಮಂಜು ಕವಿದ ಸಂಜೆ ಕಥೆಯಲ್ಲಿ' ಪ್ರಭುದೇವ ಹೆಂಡತಿಯಿದ್ದರೂ ತನ್ನ ಅಕ್ಕನ ಮಗಳೆಂದು ಹೇಳಿಕೊಂಡು ಪರಿಚಯವಾದ ಮಂಜು ಜೊತೆ ತನ್ನ ಕಾಮ ತೃಷೆ ಈಡೇರಿಸಿಕೊಳ್ಳುತ್ತಾನೆ. ಇಲ್ಲಿ ಗಮನಿಸಬೇಕಾದ ಇನ್ನೊಂದು ವಿಚಾರವೆಂದರೆ, ಹೆಣ್ಣು ಕೇವಲ ಸಂಸಾರದ ಕಣ್ಣಾಗಿ, ಗೆಳತಿಯಾಗಿ, ಸಹವರ್ತಿಯಾಗಿ ಪ್ರತಿನಿಧಿಸಲಷ್ಟೆ ಅಲ್ಲ ತನ್ನ ದೇಹ ಸೌಂದರ್ಯವನ್ನು ಬಂಡವಾಳನ್ನಾಗಿ ಮಾಡಿಕೊಂಡು ಪ್ರಭುದೇವನಂತಹ ಆಸೆ ಬುರುಕನಿಗೆ, ತಕ್ಕ ಪಾಠ ಕಲಿಸುವ ಹೆಂಗಸಾಗಿಯೂ ಕಂಡುಬರುತ್ತಾಳೆ. ಇವಳ ನಯವಾದ ಮಾತು, ನಾಟಕದ ಪ್ರೀತಿಯಿಂದ ತನ್ನ ಬಲೆಗೆ ಬೀಳಿಸಿಕೊಳ್ಳುವ ಚಾಕುಚಕ್ಯತೆ ಆಗಿರುತ್ತದೆ. ಈ ಸಂಬಂದ ಲಂಕೇಶರ ಮಾತು ಅರ್ತಪೂರ್ಣ "ಸುಂದರಿಯರಿಗೆ ಪುರುಷನೊಂದಿಗೆ ಬೆರೆಯುವ ಲಹರಿಗಳಿರುತ್ತವೆ: ಈ ವೇವ್ಸ್ ಕೆಲವು ಹೆಂಗಸರಲ್ಲಿ ಎಷ್ಟು ತೀಕ್ಷ್ಣವಾಗಿರುತ್ತವೆಂದರೆ ಅವುಗಳನ್ನು ಯಾವ ಗಂಡಸರೂ ಎದುರಿಸಿ ಗೆಲ್ಲಲಾರ ಎಂದು ಹೇಳುತ್ತಿದ್ದರು".[೯] 'ಕಣ್ಮರೆ' ಕಥೆಯಲ್ಲಿ ವಿಶ್ವನಾಥಶಾಸ್ತ್ರಿಯವರ ಹೆಂಡತಿ ಕೆಲಸಗಾರ ಮಾರನ ಜೊತೆ ಓಡಿಹೋಗುತ್ತಾಳೆ. 'ಚಂದ್ರಪ್ಪಗೌಡರಿಗೆ ಬಿದ್ದ ಕನಸು' ಕತೆಯಲ್ಲಿ ಸಮಾಜ ಸೇವಕಿ ಚಂದ್ರಪ್ಪನ ಹೆಂಡತಿ ರತ್ನಮ್ಮ ಗಸಗಸೆ ಮರದ ಮರೆಯಲ್ಲಿ ಪರಪುರುಷನಲ್ಲಿ ಒಂದಾಗುತ್ತಾಳೆ. 'ನನ್ನ ಅಣ್ಣನ ನೆನಪು' ಕತೆಯಲ್ಲಿ ನಿರೂಪಕಿಯ ಅಪ್ಪ ಸರಸಿ ಎಂಬುವಳ ಜೊತೆ ಸಂಬಂಧ ಹೊಂದುತ್ತಾನೆ. 'ದಾಳ' ಕತೆಯಲ್ಲಿನ ಮಲ್ಲಿ ಅಂತರಾಳದಲ್ಲಿ ಹುದುಗಿರುವಂತಹ ಕಾಮವನ್ನು ಹೊರಹಾಕುವ ಹೆಣ್ಣಾಗಿ ಕಂಡುಬರುತ್ತಾಳೆ. ಸಂಗಣ್ಣಗೌಡರ ಮಗ ಬಸವನನ್ನು ಬಯಸಿದಳು ಅವನನ್ನು ಅಪ್ಪಿ ಜೋಳದ ಹೊಲಕ್ಕೆ ಎಳೆದೊಯ್ಯುವ ಬಯಕೆ ಆಕೆಗಿತ್ತು ಆದರೆ ಭಯದಿಂದ ನಡುಗಿ ಕಾಮವನ್ನು ಅಡಗಿಸಿಟ್ಟುಕೊಂಡಿದ್ದಳು. ನಂತರ ಸಲಿಂ ಎಂಬ ರಜಕಾರರನ ಜೊತೆಗೆ ಸೇರುತ್ತಾಳೆ. ಆದರೆ ಅಂತಿಮವಾಗಿ ಸಲೀಂ ನನ್ನು ಸುಟ್ಟುಹಾಕಿದಾಗ ಮಲ್ಲಿ ಅಸಹಾಯಕಳಾಗಿ ಕಣ್ಣೀರಿಡುತ್ತಾಳೆ. ಪ್ರೀತಿ,ತ್ಯಾಗ, ನೋವು, ಬಯಕೆ, ಕಾಮ, ಆತುರ, ಸಂಭೋಗ, ತುಡಿತ, ಸೆಳೆತ, ಚಂಚಲತೆ ಅನುಭವಿಸಬೇಕೆಂಬ ಬಯಕೆ ಪ್ರತಿಯೊಂದು ಮಲ್ಲಿಯ ಪಾತ್ರದ ಮೂಲಕ ಪ್ರತಿನಿಧಿಸುವುದನ್ನು ಕಾಣಬಹುದು. ಹೊಸ ತಲೆಮಾರಿನ ಕಥಾನಕ ಕಥೆಗಳ ನಿರೂಪಕರಲ್ಲಿ ಲಂಕೇಶ್ ಪ್ರಮುಖರು. ಇವರ ಬಹಳಷ್ಟು ಅಭಿವ್ಯಕ್ತಿ ರೂಪಗಳು ಅಂದಂದಿನ ಸಾಮಾಜಿಕ ಪಿಡುಗನ್ನು ಅಭಿವ್ಯಕ್ತಿಸುವ ಕ್ರಮವು ಹದವರಿತು ರೂಪುಗೊಂಡಿದೆ.

ಲಂಕೇಶರು ಪ್ರಗತಿಪರ ಕಥೆಗಾರರು ಎಂಬುದಕ್ಕೆ ಇವರ ಕಥೆಗಳಲ್ಲಿರುವ ಉದ್ಯೋಗಸ್ತ ಮಹಿಳಾ ಸಮಾಜವೇ ಸಾಕ್ಷಿಯಾಗಿದೆ. 'ದಾಹ' ಕತೆಯಲ್ಲಿನ ಮೀರಾ ಟೈಪಿಸ್ಟ್, ಹುಡುಕಾಟ ಕತೆಯಲ್ಲಿನ ನಾಯಕಿ ಕುಸುಮ ಟೀಚರ್, ಜೀರ್ಣೋಭವ ಕತೆಯಲ್ಲಿನ ಸರೋಜ ದಾದಿ, ನಿವೃತ್ತರು ಕತೆಯಲ್ಲಿ ನರಸಿಂಗರಾಯನ ಶೋಷಣೆಯನ್ನು ಪ್ರತಿಭಟಿಸಿದ ಮೀರಾ ಟೈಪಿಸ್ಟ್, 'ರುದ್ರಾಣಿಯ ಸುಪ್ತ ಕತೆ' ಕತೆಯಲ್ಲಿನ ರುದ್ರಾಣಿ ಶಿಕ್ಷಣ ಸಂಸ್ಥೆಯೊಂದರ ಮುಖ್ಯಸ್ಥೆ. ಇಲ್ಲಿ ಲಂಕೇಶರು ಶೋಷಣೆಯನ್ನು ಸಹಿಸಲಾರದಂತಹ ಹೆಣ್ಣಾಗಿಯೂ ಆಗುತ್ತಿರುವ ಅನ್ಯಾಯವನ್ನು ತನ್ನ ಬಲಪ್ರಯೋಗದಿಂದಲಾದರೂ ಸರಿಪಡಿಸಿ ಆತ್ಮಸ್ಥೈರ್ಯ ಧೈರ್ಯಗಾತಿ ಹೆಣ್ಣಾಗಿ ರುದ್ರಾಣಿಯನ್ನು ಚಿತ್ರಿಸಿದ್ದಾರೆ.

ಈ ವ್ಯವಸ್ಥೆಯಿಂದ ಶೋಷಣೆಗೊಂಡ ಮಹಿಳಾ ಸಮಾಜವನ್ನು ಕೂಡಾ ಲಂಕೇಶರ ಕತೆಗಳಲ್ಲಿ ಗುರುತಿಸಬಹುದು. ಉದಾಹರಣೆಗೆ 'ನಿವೃತ್ತರು' ಕತೆಯಲ್ಲಿ ಪ್ರಹ್ಲಾದರಾಯರ ಹೆಂಡತಿ ಮತ್ತು ಮಗಳು ಬಾಸ್ ಆಗಿರುವ ನರಸಿಂಗರಾಯನ ಕಾಮಕ್ಕೆ ಬಲಿಯಾಗುತ್ತಾರೆ. 'ಕೊನೆ' ಕತೆಯಲ್ಲಿ ಉಜ್ಜನ ಕಾಮಕ್ಕೆ ಗೌಡರ ಮಗಳು ಪಾರ್ವತಿ ಬಲಿಯಾಗುತ್ತಾಳೆ. 'ರೊಟ್ಟಿ' ಕತೆಯಲ್ಲಿ 'ಆಕೆ' ಪಾತ್ರದಾರಿ ಪೋಲಿಸರ ದೌರ್ಜನ್ಯಕ್ಕೆ ತುತ್ತಾಗುತ್ತಾಳೆ. 'ಉಮಾಪತಿಯ ಸ್ಕಾಲರ್‌ಶಿಪ್' ಯಾತ್ರೆ ಕತೆಯಲ್ಲಿ ಉಮಾಪತಿಯ ಅವ್ವ ಈರವ್ವ ಮತ್ತು ಅಕ್ಕ ಲಿಂಗಿ ನಿಂಗೇಗೌಡನಿಂದ, ಶೇಖರಪ್ಪನಿಂದ, ಹುಸೇನಿಯಿಂದ ಶೋಷಣೆಗೆ ಈಡಾಗುತ್ತಾರೆ. 'ಜೊತೆಗಾರ' ಕಥೆಯಲ್ಲಿ ನಾಯಕರ ಹೆಂಡತಿ ಸೀತಮ್ಮ ಗಂಡನ ಅನೈತಿಕ ನಡೆಯಿಂದ ನೋವುಂಡರೆ, ಈರಿ ಸ್ವತಃ ತನ್ನ ತಂದೆಯಿಂದಲೇ ಕಾಮಿಸಲ್ಪಟ್ಟು ಶೋಷಣೆಗೆ ಗುರಿಯಾಗುತ್ತಾಳೆ. 'ಮಾರಲಾಗದ ನೆಲೆ' ಕತೆಯಲ್ಲಿ ಸಂಕ್ರಪ್ಪನ ಮಗಳು ಸಾವಂತ್ರಿ ರುದ್ರ ಮತ್ತು ವಿಶ್ವನಾಥನ ಕಾಮಕ್ಕೆ ಬಲಿಯಾಗುತ್ತಾಳೆ. 'ಗುತ್ತಿ ಗೀತಾ ಆದದ್ದು' ಕತೆಯಲ್ಲಿ ಹಳ್ಳಿಯ ಅಮಾಯಕ ಹೆಣ್ಣುಮಗಳಾದ ಗುತ್ತಿಯನ್ನು ಸಣ್ಣಮುನಿಯನಿಂದ ಹಿಡಿದು ಪೋಲೀಸ್ ಬಾಪಟ್, ಪುಟ್ಟಯ್ಯ, ಮೂರ್ತಿ, ಭದ್ರಯ್ಯ, ಕೀರ್ತಿರಾಜರು ಹೀಗೆ ಎಲ್ಲರ ಕ್ರೌರ್ಯಕ್ಕೆ ಒಳಗಾಗುತ್ತಾಳೆ. 'ದಾಹ' ಕತೆಯಲ್ಲಿ ನಾಯಕನ ದಾಹಕ್ಕೆ ಹೆಂಡತಿ ಹಾಗೂ ಸೆಲ್ವಿಯಾ ಬಲಿಯಾಗುತ್ತಾರೆ. 'ನನ್ನ ಅಣ್ಣನ ನೆನಪು' ಕತೆಯಲ್ಲಿ ನಿರೂಪಕಿಯ ತಂದೆ ಸರಸಿಯ ಜೊತೆ ಅನೈತಿಕ ಸಂಬಂಧ ಹೊಂದಿದ್ದ ವಿಷಯ ಅವನ ಹೆಂಡತಿಗೆ ಗೊತ್ತಿದ್ದರೂ ವಿರೋಧಿಸಲಾಗದೆ ಪ್ರಾಣ ತ್ಯಜಿಸುತ್ತಾಳೆ. 'ಮಂಜು ಕವಿದ ಸಂಜೆ' ಕತೆಯ ನಾಯಕಿ ತನ್ನ ಗಂಡ ಪ್ರಭುದೇವನ ಲೈಂಗಿಕ ಹಗರಣದಿಂದ ಚಿಂತೆಗೊಳಗಾಗುತ್ತಾಳೆ. ಸಾಮಾನ್ಯವಾಗಿ ಲಂಕೇಶರ ಕತೆಗಳಲ್ಲಿ ಪುರುಷನಿಂದಲೇ ಸ್ತ್ರೀ ಶೋಷಣೆಗೊಳಗಾಗುವುದನ್ನು ಗಮನಿಸಬಹುದು.

ಹೀಗೆ ಕಥೆ ಕಾದಂಬರಿ, ಕಾವ್ಯ, ನಾಟಕ, ಸಿನಿಮಾ, ಈ ಎಲ್ಲಾ ರಂಗಗಳಲ್ಲೂ ತನ್ನ ಛಾಪನ್ನು ಮೂಡಿಸಿರುವ ಮೂಲಕ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ವಿಭಿನ್ನ ಬರಹಗಾರರಾಗಿರುವ ಲಂಕೇಶರು ಮಹಿಳಾ ಪಾತ್ರಗಳನ್ನು ಭಿನ್ನ ನೋಟ-ನೆಲೆಗಳಲ್ಲಿ ಸೃಷ್ಟಿಸುವುದರ ಜೊತೆಗೆ ಸೃಜನಾತ್ಮಕವಾದ ಸಾಮಾಜಿಕ ಕಳಕಳಿಯನ್ನು ಅಭಿವ್ಯಕ್ತಿಸುತ್ತಾರೆ. ಹೀಗೆ ಲಂಕೇಶರು ನವ್ಯದ ಇತರೆ ಬರಹಗಾರರಿಗಿಂತ ಭಿನ್ನವಾಗಿ ಲೈಂಗಿಕತೆಯನ್ನ, ದಾಂಪತ್ಯ-ದಾಂಪತ್ಯೇತರ ಸಂಬಂಧಗಳ ಕುರಿತಾಗಿ ಮನುಷ್ಯನ ಒಳಹೊರ ಜಗತ್ತಿನ ಸೂಕ್ಷ್ಮತೆಗಳ ಹಿನ್ನೆಲೆಯಲ್ಲಿ ಲೈಂಗಿಕತೆಯನ್ನು ವ್ಯಾಖ್ಯಾನಿಸಿದರು. ಇವರ ಕಥೆಗಳ ಅನೇಕ ಪಾತ್ರಗಳು ಗಂಡು-ಹೆಣ್ಣು ಬೇಧವಿಲ್ಲದೆ ತಮ್ಮ ದೌರ್ಬಲ್ಯಗಳಿಂದ, ಹುಸಿತನದಿಂದ ಬೆತ್ತಲುಗೊಳ್ಳುತ್ತವೆ. ಪ್ರೀತಿ ಪ್ರೇಮ, ಅಣ್ಣತಮ್ಮ, ಅಕ್ಕತಂಗಿ, ಗಂಡ ಹೆಂಡತಿ, ಗೆಳೆಯ ಗೆಳತಿ ಈ ಎಲ್ಲಾ ಸಂಬಂಧಗಳೂ ತಮ್ಮ ಒಪ್ಪಿತ ಸಮಾಜದ ನೈತಿಕ ಮೌಲ್ಯಗಳ ಚೌಕಟ್ಟನ್ನು ಮೀರಿ ವಿಶ್ಲೇಷಣೆಗೆ ಒಳಗಾಗುತ್ತವೆ.

**<u>ಕೊನೆಟಿಪ್ಪಣಿ</u>**

1. ಸಾಹಿತ್ಯ ಸಂದರ್ಭ, ಟಿ.ಪಿ. ಅಶೋಕ, ಪುಟ-೧೫೯ ಅಕ್ಷರ ಪ್ರಕಾಶನ,೧೯೯೧)
2. ಸಮಗ್ರ ಕಥೆಗಳು , ಪಿ.ಲಂಕೇಶ್, ಪುಟ-೭೭
3. ಸಮಗ್ರ ಕಥೆಗಳು, ಪಿ.ಲಂಕೇಶ್, ೧೯೯೨, ಪುಟ-೭೭
4. ಸಮಗ್ರ ಕಥೆಗಳು , ಪಿ.ಲಂಕೇಶ್, ಪುಟ-೩೭೬
5. ಸಾಹಿತ್ಯ ಸಂದರ್ಭ, ಟಿ.ಪಿ. ಅಶೋಕ., ಪುಟ-೧೫೨, ಅಕ್ಷರಪ್ರಕಾಶನ, ಸಾಗರ -೧೯೯೧)
6. ಲಂಕೇಶ್.ಪಿ, ಕಲ್ಲುಕರಗುವ ಸಮಯ ಪುಟ-೯
7. ಪಿ.ಲಂಕೇಶ್ ಸಮಗ್ರ ಕಥೆಗಳು,೧೯೯೨, ಪುಟ-೩೬೯.
8. ಕೆ.ಮರುಳಸಿದ್ದಪ್ಪ : ಲಂಕೇಶ್ ಬದುಕು ಬರೆಹ ಪು-೪೩,೪೩
9. ಮಂಜು ಕವಿದ ಸಂಜೆ ಮತ್ತು ಇತರ ಕಥೆಗಳು, ಪುಟ-೨, ಪಿ.ಲಂಕೇಶ್, ಪತ್ರಿಕೆ ಪ್ರಕಾಶನ, ೨೦೦೪,

**ಪರಾಮರ್ಶನಾ ಕೃತಿಗಳು**


1. ಸಮಗ್ರ ಕಥೆಗಳು,ಪಿ.ಲಂಕೇಶ್, ೧೯೯೨
2. ಕನ್ನಡ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ, ಎನ್.ಕೆ. ಕೋದಂಡರಾಮ, , ಗಾಯತ್ರಿ ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೯೨
3. ಸಾಹಿತ್ಯ ಸಂದರ್ಭ, ಟಿ.ಪಿ. ಅಶೋಕ. ಅಕ್ಷರಪ್ರಕಾಶನ, ಸಾಗರ –೧೯೯೧
4. ಮಂಜು ಕವಿದ ಸಂಜೆ ಮತ್ತು ಇತರ ಕಥೆಗಳು, ಪಿ.ಲಂಕೇಶ್, ಪತ್ರಿಕೆ ಪ್ರಕಾಶನ, ೨೦೦೪,
5. ಏಕ–ಅನೇಕ, ಎಚ್.ಶಶಿಕಲಾ, ಬೆಳಕು ಪ್ರಕಾಶನ, ೨೦೧೬
6. ತಲೆಮಾರಿನ ತಳಮಳ, ವಿಜಯಾದಬ್ಬೆ, , ಪುಟ–೨೦೭